ಸಿ.ಸಿ.ನಂ.2049/2025

ಪಿ.ಡಬ್ಲೂಃ 1

ದಿನಾಂಕಃ 21/01/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ**

1. ದಿನಾಂಕ 16.04.2008 ರಂದು ಮಡಿಕೇರಿಯ ಸಹಕಾರ ಸಂಘದ ಸಹಾಯಕರ ನಿರ್ಬಂಧಕ ಕಚೇರಿಯಲ್ಲಿ, ಸಹಕಾರ ಸಂಘದ ನಿರೀಕ್ಷಕರಾಗಿ ನೇಮಕಗೊಂಡಿರುತ್ತೇನೆ. ನಾನು ಸಹಕಾರ ಸಂಘದ ನಿರೀಕ್ಷಕರಾಗಿ ನೇಮಕಗೊಂಡ ದಿನದಿಂದ ಈವರೆಗೂ ಇದೇ ಮೊದಲ ಪ್ರಕರಣ ನಾನು ದಾಖಲಿಸುವ ಮೊದಲ ಪ್ರಕರಣವಾಗಿರುತ್ತದೆ. ಚಾಸಾ-2 ರವರ ನೀಡಿದಂತಹ ವರದಿಯ ಮೇರೆಗೆ ನಾನು ಕ್ರಿಮಿನಲ್ ಪ್ರಕರಣ ದಾಖಲಿಸಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಮತ್ತು ಚಾಸಾ-2 ರವರು ಜಂಟಿಯಾಗಿ ತನಿಖೆಯನ್ನು ಕೈಗೊಂಡಿರುತ್ತೇವೆ ಮತ್ತು ಜಂಟಿ ವರದಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸುಳ್ಳು. ನಾನು ಮತ್ತು ಚಾಸಾ-2 ರವರು ಜಂಟಿಯಾಗಿ ತನಿಖೆಯನ್ನು ಮಾಡಿ ವರದಿಯನ್ನು ನೀಡಿದ್ದರೂ ಕೂಡ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನಗೆ ಬ್ಯಾಂಕಿನ ವ್ಯವಹಾರದ ಬಗ್ಗೆ ಗೊತ್ತಿದೆ. ಕೆಜಿಎಫ್ ನ ಕೆನರಾ ಬ್ಯಾಂಕ್ ನಲ್ಲಿ ದಿನಕ್ಕೆ 30 ರಿಂದ 40 ಖಾತೆಯನ್ನು ಗ್ರಾಹಕರು ಹೊಸದಾಗಿ ತೆರೆಯುತ್ತಾರೆ ಎಂದರೆ ಇರಬಹುದು. ಕರುಮಾರಿ ಸಹಕಾರ ಸಂಘದವರೂ ಕೂಡ ಕೆಜಿಎಫ್ ನ ಕೆನರಾ ಬ್ಯಾಂಕಿನಲ್ಲಿ ಖಾತೆಯನ್ನು ತೆರೆದಿರುತ್ತಾರೆ ಎಂದರೆ ಸರಿ. ದಿನಾಂಕ 21.09.2010 ರಂದು ಕರುಮಾರಿ ಸಹಕಾರ ಸಂಘದಲ್ಲಿ ಅವ್ಯವಹಾರ ಆಗಿದೆ ಎಂದು ಹೇಳಿ ಚಾಸಾ-2 ರವರಿಗೆ ಮೇಲಾಧಿಕಾರಿಯವರು ಆದೇಶ ನೀಡಿರುತ್ತಾರೆ. ಚಾಸಾ-2 ರವರ ಮೇಲಾಧಿಕಾರಿಯವರು ಸುಮಾರು 37 ಸಹಕಾರ ಸಂಘದಲ್ಲಿ ಅವ್ಯವಹಾರ ಆಗಿರುತ್ತದೆ ಎಂದು ಹೇಳಿ ಆದೇಶ ಮಾಡಿರುತ್ತಾರೆ ಅದರಲ್ಲಿ ಕರುಮಾರಿ ಸಹಕಾರ ಸಂಘವೂ ಕೂಡ ಒಂದು ಆಗಿರುತ್ತದೆ. ಕರುಮಾರಿ ಸಹಕಾರ ಸಂಘದ ಅಧ್ಯಕ್ಷಕರು, ಕಾರ್ಯದರ್ಶಿ ಅಥವಾ ಸದಸ್ಯರು ದೂರನ್ನು ನೀಡಿರುವುದಿಲ್ಲ. ಸಿ.ಸಿ.ನಂ.579/2014 ಪ್ರಕರಣದ 1 ರಿಂದ 3 ನೇ ಆರೋಪಿತರು ಕೆನರಾ ಬ್ಯಾಂಕಿನಲ್ಲಿ ಖಾತೆಯನ್ನು ತೆರೆದಿರುತ್ತಾರೆ ಎಂದರೆ ಗೊತ್ತಿಲ್ಲ. ಅದೇ ರೀತಿ 1 ಮತ್ತು 2 ನೇ ಆರೋಪಿತರು ಬಂಗಾರಪೇಟೆ ಶಾಖೆಯ ಡಿ.ಸಿ.ಸಿ. ಬ್ಯಾಂಕಿನಲ್ಲೂ ಕೂಡ ಖಾತೆಯನ್ನು ತೆರೆದಿರುತ್ತಾರೆ. ಆ ಸಮಯದಲ್ಲಿ 3 ನೇ ಆರೋಪಿ 1 ಮತ್ತು 2 ನೇ ಆರೋಪಿತರನ್ನು ಖಾತೆ ತೆರೆಯುವ ಸಮಯದಲ್ಲಿ ಗುರುತಿಸಿರುತ್ತಾರೆ. 1 ಮತ್ತು 2 ನೇ ಆರೋಪಿತರು ಮೂಲತಃ ಕರುಮಾರಿ ಸಹಕಾರ ಸಂಘದ ಅಧ್ಯಕ್ಷಕರು ಮತ್ತು ಕಾರ್ಯದರ್ಶಿ ಆಗಿರುವುದಿಲ್ಲ.

3. ಸಾಮಾನ್ಯವಾಗಿ ಸಹಕಾರ ಸಂಘದವರು ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯಬೇಕಾದರೆ ಸಹಕಾರ ಸಂಘದ ನೊಂದಣಿ ಪ್ರಮಾಣ ಪತ್ರ, ಸಂಘದ ನೊಂದಾಯಿತ ಉಪ ನಿಯಮಗಳ ಪ್ರತಿ, ಸಂಘದ ಅಧ್ಯಕ್ಷಕರು ಆಯ್ಕೆಯಾದ ಪ್ರತಿ, ಕಾರ್ಯದರ್ಶಿಯವರ ನೇಮಕಾತಿ ಆದೇಶ, ವಾಣಿಜ್ಯ ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯಬೇಕಾದರೆ ಸಂಬಂಧಪಟ್ಟ ನಿರ್ಬಂಧಕರಿಂದ ಅನಮತಿ ಪತ್ರ ಹಾಗೂ ಸಂಘದ ಆಡಳಿತ ಮಂಡಳಿಯ ನಡವಳಿಕೆಯನ್ನು ನೀಡಬೇಕಾಗುತ್ತದೆ. ಸದರಿ ಆಡಳಿತ ಮಂಡಳಿಯ ನಡವಳಿಕೆಯಲ್ಲಿ ನಿರ್ದೇಶಕರ ಸಹಿ ಇರಬೇಕಾಗುತ್ತದೆ ಎಂದರೆ ಸರಿ.

4. ಕರುಮಾರಿ ಸಹಕಾರ ಸಂಘದವರು ಕೆನರಾ ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯುವ ಸಮಯದಲ್ಲಿ ಎಲ್ಲಾ ದಾಖಲೆಗಳನ್ನು ನೀಡಿರುತ್ತಾರೆ ಎಂದರೆ ಸರಿ. ದಾಖಲೆಗಳನ್ನು ಹಾಜರುಪಡಿಸಿದ ಮೇರೆಗೆ ಖಾತೆಯನ್ನು ತೆರೆದಿರುತ್ತಾರೆ ಎಂದರೆ ಇರಬಹುದು. ಕರುಮಾರಿ ಸಹಕಾರ ಸಂಘದವರು ನೀಡಿದಂತಹ ದಾಖಲೆಗಳ ಮೇರೆಗೆ ಕೆನರಾ ಬ್ಯಾಂಕಿನಲ್ಲಿ ಖಾತೆ ತೆರೆಯಲಾಗಿರುತ್ತದೆ ಎಂದರೆ ಸರಿ.

5. ಕೆನರಾ ಬ್ಯಾಂಕಿನವರು ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಖಾತೆಯನ್ನು ತೆರೆಯಲು ಅನುಮತಿಯನ್ನು ಕೊಟ್ಟಿರುತ್ತಾರೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಅದೇ ರೀತಿ 2 ಮತ್ತು 3 ನೇ ಆರೋಪಿತರು ಬಂಗಾರಪೇಟೆ ಶಾಖೆಯ ಡಿ.ಸಿ.ಸಿ. ಬ್ಯಾಂಕಿನಲ್ಲೂ ಕೂಡ ಖಾತೆಯನ್ನು ತೆರೆದು ಪರಿಶಿಷ್ಟ ಜಾತಿಯವರಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಮಂಜೂರಾದಂತಹ ರೂ.82,000/- ಗಳನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಚಾಸಾ-2 ರವರ ತನಿಖಾ ವರದಿಯಲ್ಲಿ ಕೆನರಾ ಬ್ಯಾಂಕಿನವರು ಮೋಸ ಮಾಡಿರುವುದಿಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸುಳ್ಳು. ಅದೇ ರೀತಿ ಚಾಸಾ-2 ರವರ ತನಿಖಾ ವರದಿಯಲ್ಲಿ 1 ರಿಂದ 3 ನೇ ಆರೋಪಿತರ ವಿರುದ್ಧ ಕಾನೂನು ಕ್ರಮಕೈಗೊಂಡು ಹಣವನ್ನು ವಸೂಲಾತಿ ಮಾಡಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ. ಸಿ.ಸಿ.ನಂ.579/2014 ರಲ್ಲಿ 4 ನೇ ಆರೋಪಿಯ ವಿರುದ್ಧ ಕ್ರಮ ಜರುಗಿಸಬೇಕಾಗಿರುತ್ತದೆ ಎಂದು ಹೇಳಿ ಶಿಫಾರಸ್ಸು ಮಾಡಿರುವುದಿಲ್ಲ ಎಂದರೆ ಹೆಚ್ಚುವರಿ ತನಿಖೆಯ ಅವಶ್ಯಕತೆ ಇದೆ ಎಂದು ತಿಳಿಸಿರುತ್ತಾರೆ. 4 ನೇ ಆರೋಪಿಯ ವಿರುದ್ಧ ತನಿಖೆಯನ್ನು ನಡೆಸಲು ಶಿಫಾರಸ್ಸು ಮಾಡಲು ಅಧಿಕಾರ ಇರುವುದಿಲ್ಲ ಎಂದರೆ ಸುಳ್ಳು. ಚಾಸಾ-2 ರವರು ಕಲಂ 65 ರ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ ಪ್ರಕಾರ ತನಿಖೆಯನ್ನು ಮಾಡಿರುವುದಿಲ್ಲ ಹಾಗೂ ತನಿಖಾ ವರದಿಯನ್ನು ನನಗೆ ನೀಡಿರುವುದಿಲ್ಲ ಎಂದರೆ ಸುಳ್ಳು. ನಮ್ಮ ಲೋಪದೋಷಗಳನ್ನು

ಮುಚ್ಚು ಹಾಕುವ ಸಲುವಾಗಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಜಯಲಕ್ಷ್ಮೀ ಎನ್. ಬಿ)
ಪ್ರಧಾನ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ
ಕೆಜಿಎಫ್